ವಿಶ್ವವಾಣಿ

ಸಂಪಾದಕೀಯ

ಬಾಂಬ್ ಸ್ಫೋಟ; ರಾಜಕಾರಣ ಸಲ್ಲ

ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಸಂಭವಿಸಿರುವ ಬಾಂಬ್ ಸ್ಫೋಟವನ್ನು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಿದೆ. ಸಿಎಂ, ಡಿಸಿಎಂ ಮತ್ತು ಗೃಹ ಸಚಿವರು ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ಸಭೆ ಮೇಲೆ ಸಭೆಗಳನ್ನು ಮಾಡುತ್ತಿದ್ದಾರೆ. ಎಫ್‌ಎಸ್‌ಎಲ್ ಟೀಂ, ಬಾಂಬ್ ಸ್ಕ್ವಾಡ್ ಮತ್ತು ಸಿಸಿಬಿ ಪೊಲೀಸರು ಈಗಾಗಲೇ ತನಿಖೆ ಕೈಗೊಂಡಿದ್ದಾರೆ. ಏಳೆಂಟು ತಂಡಗಳಲ್ಲಿ ಕಾರ್ಯಾಚರಣೆ ನಡೆಯುತ್ತಿದೆ. ಈಗಾಗಲೇ ಆರೋಪಿ ಕುರಿತು ಕೆಲವು ಸುಳಿವು ಸಿಕ್ಕಿವೆ. ಈ ಘಟನೆ ಹಿಂದೆ ಯಾರ ಕೈವಾಡವಿದೆ? ಅವರ ಉದ್ದೇಶವೇನು ಎಂಬುದು ತಿಳಿಯಬೇಕಿದೆ. ಮುಂದೆ ಇಂಥ ಕೃತ್ಯ ಮಾಡಲು ಬೇರೆಯವರೂ ಭಯಪಡುವಂತೆ, ಆರೋಪಿಗೆ ಶಿಕ್ಷೆ ವಿಧಿಸಬೇಕಿದೆ. ಈ ಪ್ರಕರಣವನ್ನು ಆದಷ್ಟು ಶೀಘ್ರ ತನಿಖೆ ಮಾಡಿ, ಅಪರಾಧಿಯನ್ನು ಹಾಗೂ ಈ ಸಂಚಿನ ಹಿಂದಿನ ರೂವಾರಿಗಳನ್ನು ಹೆಡೆಮುರಿ ಕಟ್ಟಲು ರಾಜ್ಯದ ಪೊಲೀಸರ ಯಶಸ್ವಿಯಾಗಲಿದ್ದಾರೆ ಎಂಬ ನಂಬಿಕೆ ಇದೆ. ಈ ಪ್ರಕರಣವನ್ನು ಸಚಿವ ಸಂಪುಟದ ಯಾರೊಬ್ಬರೂ ಸಮರ್ಥಿಸಿಕೊಂಡಿಲ್ಲ, ಆದರೆ ಈ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸುವಂತೆ ಒತ್ತಾಯಿಸುವ ಮೂಲಕ ಪ್ರತಿಪಕ್ಷಗಳು ವಿನಾಕಾರಣ ರಾಜಕಾರಣಕ್ಕೆ ಬಳಸಿಕೊಳ್ಳುವ ಪ್ರಯತ್ನ ಮಾಡುತ್ತಿವೆ. ಬ್ರ್ಯಾಂಡ್ ಬೆಂಗಳೂರು ಅಲ್ಲ, ಬಾಂಬ್ ಬೆಂಗಳೂರು ಎಂದು ಬಿಜೆಪಿಯವರು ಟೀಕೆ ಮಾಡುತ್ತಿದ್ದಾರೆ. ಹಾಗೆ ನೋಡಿದರೆ ಬಿಜೆಪಿ ಅಧಿಕಾರದಲ್ಲಿದ್ದಾಗಲೂ ನಾಲ್ಕು ಬಾರಿ ಬಾಂಬ್ ಸ್ಫೋಟ ಆಗಿದೆ. ಈ ಸ್ಫೋಟ ರಾಜ್ಯ ಸರಕಾರದ ವೈಫಲ್ಯವೆಂದರೆ ಕೇಂದ್ರ ಸರಕಾರದ ಅಧೀನದಲ್ಲಿರುವ ಎನ್‌ಐಎ, ಗುಪ್ತಚರ ಇಲಾಖೆ, ಗೂಢಚಾರ ಸಂಸ್ಥೆ 'ರಾ'ದ ವೈಫಲ್ಯವೂ ಅಲ್ಲವೇ? ಆದ್ದರಿಂದ ಇಂತಹ ಘಟನೆಗಳು ನಡೆದಾಗ ಯಾರೂ ರಾಜಕಾರಣ ಮಾಡಬಾರದು. ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಮೂಡಿದರೆ, ದುಷ್ಕರ್ಮಿಗಳು ಅದರ ಲಾಭ ಪಡೆಯುತ್ತಾರೆ. ನಿರ್ಭಯ ಸಮಾಜವಿದ್ದರೆ ಮಾತ್ರ ಅಭಿವೃದ್ಧಿ ಸಾಧಿಸಬಹುದು. ಜನರು ನೆಮ್ಮದಿಯಿಂದ ಬದುಕು ಸಾಗಿಸಬಹುದು. ಆಡಳಿತ ಮತ್ತು ಪ್ರತಿಪಕ್ಷಗಳು ಅದಕ್ಕೆ ಅವಕಾಶ ಮಾಡಿಕೊಡಬೇಕು.

ಸೊಂಪಾದಕೀಯ

ಗಂಭೀರ್ ರಿಟೈರ್ಡ್!

ಲೋಕಸಭೆ ಚುನಾವಣೆಗೆ ಬಿಜೆಪಿ ತನ್ನ ಅಭ್ಯರ್ಥಿಗಳ ಆಯ್ಕೆ ಶುರು ಮಾಡಿದೆ. ಮೊನ್ನೆ ರಾತ್ರಿ ಮೂರೂವರೆವರೆಗೂ ಸ್ವತಃ ನರೇಂದ್ರ ಮೋದಿ ಕೂಡಾ ಹಾಜರಿದ್ದು ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ. ಅಲ್ಲದೆ ಬಿಜೆಪಿ ಅಭ್ಯರ್ಥಿಗಳನ್ನು ಆಯ್ಕೆ ಮಾಡೋ ಕೆಲಸವನ್ನೂ 'ದೇಶದ ಕೆಲಸ' ಎನ್ನುವಂತೆ ಬಿಂಬಿಸಿ, 'ಪ್ರಧಾನಿ ಮೋದಿ, ರಾತ್ರಿ ಮೂರೂವರೆವರೆಗೂ ಕೆಲಸ ಮಾಡಿ ನಂತರ ಬೆಳಗ್ಗೆ 8 ಗಂಟೆಗೆ ಮತ್ತೆ ಕೆಲಸಕ್ಕೆ ಹಾಜರಾಗಿದ್ದಾರೆ. ದೇಶಕ್ಕಾಗಿ ಇಷ್ಟು ಕೆಲಸ ಮಾಡೋ ಪ್ರಧಾನಿಯನ್ನು ಪಡೆದ ನಾವೇ ಧನ್ಯರು' ಅಂತ ಬಿಜೆಪಿಯವರು ಮತ್ತು ಅವರ ಬೆಂಬಲಿಗರು ತಮ್ಮ ತಮಟೆ ತಾವೇ ಹೊಡೆದುಕೊಂಡಿದ್ದಾರೆ. ರಾತ್ರಿ ಮೂರೂವರೆ ವರೆಗೂ ಅವರು ಮಾಡಿದ್ದು ದೇಶದ ಕೆಲಸ ಅಲ್ಲಪ್ಪ, ಬಿಜೆಪಿ ಅನ್ನೋ ಪಕ್ಷದ ಕೆಲಸ ಅಂತ ಅವರಿಗೆ ಯಾರೂ ತಿಳಿಹೇಳಿಲ್ಲ. ಅದೇನೇ ಇದ್ದರೂ, ತಿಳಿಯಾಗಿರುವ ರಾಷ್ಟ್ರ ರಾಜಕಾರಣ ಈಗ ರಾಡಿ ಆಗುವ ಹೊತ್ತು. ಯಾಕಂದ್ರೆ, ಟಿಕೆಟ್ ಸಿಗಲಿಲ್ಲ ಅಂತ ಸಾಕಷ್ಟು ಜನರು ಅಸಮಾಧಾನ ಹೊಮ್ಮಿಸುವುದನ್ನು ನಾವು ಕಾಣಲಿದ್ದೇವೆ ಅನ್ನೋದಂತೂ ಸತ್ಯ. ಈ ನಡುವೆ ಒಟ್ಟು 195 ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ರೆಡಿ ಮಾಡಿದೆ. ಇದರಲ್ಲಿ 34 ಜನ ಸಚಿವರು ಇದ್ದಾರೆ ಅನ್ನೋದು ಗಮನಾರ್ಹ. ಹಾಗಾಗಿ ಈ ಬಾರಿ ಹೊಸಬರಿಗೆ ಮಣೆ ಹಾಕುವ ಕೆಲಸ ಸ್ವಲ್ಪ ಕಮ್ಮಿ ಆಗುವ ಸಾಧ್ಯತೆಗಳಿವೆ. ಅಂದಹಾಗೆ ಕ್ರಿಕೆಟಿಗ ಮತ್ತು ಸಂಸದ ಗೌತಮ್ ಗಂಭೀರ್ ಮಾತ್ರ, ಈ ಬಾರಿಯ ಚುನಾವಣೆಯಿಂದ ನನಗೆ ವಿಶ್ರಾಂತಿ ಬೇಕು ಎಂದು ಲೋಕಸಭಾ ಚುನಾವಣೆಯ ಸರಣಿಯಿಂದ ಹಿಂದೆ ಸರಿದಿದ್ದಾರೆ. ಐಪಿಎಲ್‌ನಲ್ಲಿ ಹೆಚ್ಚು ಜವಾಬ್ದಾರಿ ಹೊರಬೇಕು ಅನ್ನೋ ಕಾರಣಕ್ಕೆ ರಾಜಕಾರಣಕ್ಕೆ ಬ್ರೇಕ್ ನೀಡಿದ್ದಾರೆ ಗೌತಮ್ ಗಂಭೀರ್. ಹಾಗಾಗಿ ಈ ಬಾರಿಯ ಐಪಿಎಲ್‌ನಲ್ಲಿ ಇನ್ನಷ್ಟು ಉತ್ಸಾಹದಿಂದ ಕ್ರಿಕೆಟ್ ಮೈದಾನದಲ್ಲಿ ಓಡಾಡುವ ಗಂಭೀರ್ ಅವರನ್ನು ನಾವು ನೋಡಬಹುದು. ಆದರೆ ಅಗ್ರೆಸಿವ್ ನೇಚರ್‌ಗೆ ಹೆಸರಾದ ಅವರು ವಿರಾಟ್ ಕೊಹ್ಲಿ ಸೇರಿದಂತೆ ಹಲವರ ಜತೆ ನಡೆಸಿದ ಕಿರಿಕ್ ಕೆಲಸಗಳು ಫೇಮಸ್ ಆಗಿವೆ. ಹಾಗಾಗಿ, ಸಂಸದರಾಗಲು ಫೈಟ್ ಮಾಡುತ್ತಿಲ್ಲವಾದರೂ ಕ್ರಿಕೆಟ್ ಮೈದಾನದಲ್ಲಿ ಗಂಭೀರ್ ಅವರು ಇನ್ನಷ್ಟು ಸಹೋದ್ಯೋಗಿಗಳ ಜತೆ ಫೈಟ್ ಮಾಡುವುದನ್ನಂತೂ ನಾವು ಖಂಡಿತಾ ನೋಡಲಿದ್ದೇವೆ ಅನ್ನೋದು ಸತ್ಯ.

ಸಂಪಾದಕರ ಸದ್ಯಶೋಧನೆ

ಹಿಂದಿ ಹಾಡು ನಿಷೇಧಿಸಿದ್ದ ಕೇಸ್ಕರ್

ಈ ತಲೆಮಾರಿನ ರಾಜಕಾರಣಿಗಳು, ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ಸಿಗರು, ಒಂದು ಕಾಲಕ್ಕೆ ತಮ್ಮ ಪಕ್ಷದವರೇ ಆದ ಬಿ.ವಿ.ಕೇಸ್ಕರ್ (ಬಾಲಕೃಷ್ಣ ವಿಶ್ವನಾಥ ಕೇಸ್ಕರ್) ಅವರ ಹೆಸರನ್ನು ಕೇಳಿರುವ ಸಾಧ್ಯತೆ ಕಮ್ಮಿ. ಅವರು ನಿಧನರಾಗಿಯೇ 40 ವರ್ಷಗಳಾದವೆನ್ನಿ. ಅವರು ಸುದೀರ್ಘ ಅವಧಿಗೆ ಕೇಂದ್ರದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವರಾಗಿದ್ದರು. ಸಾಮಾನ್ಯವಾಗಿ ಒಂದು ಪೂರ್ಣ ಅವಧಿಗೆ ಈ ಖಾತೆಯಲ್ಲಿ ಸಚಿವರಾಗಿರುವುದೇ ಹೆಚ್ಚು, ಹೀಗಿರುವಾಗ ಕೇಸ್ಕರ್ ನಿರಂತರ 10 ವರ್ಷ (1952ರಿಂದ 1962) ಆ ಖಾತೆಯ ಸಚಿವರಾಗಿದ್ದರು. ಮೂಲತಃ ಪುಣೆಯವರಾದ ಕೇಸ್ಕರ್, ಮಹಾರಾಷ್ಟ್ರದ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು. ಕಾಶಿ ವಿದ್ಯಾಪೀಠದಲ್ಲಿ ವಿದ್ಯಾಭ್ಯಾಸ ಪೂರೈಸಿದ ಬಳಿಕ ಫ್ರಾನ್ಸಿನಲ್ಲಿ ಡಿ.ಲಿಟ್ ಪದವಿ ಪಡೆದು, ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿದ್ದರು. ಮಹಾತ್ಮ ಗಾಂಧಿಯವರ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದ ಕೇಸ್ಕರ್, ನಂತರ ನೆಹರುರ ಪ್ರಭಾವಕ್ಕೊಳಗಾಗಿ ಕಾಂಗ್ರೆಸ್ಸನ್ನು ಸೇರಿದರು. 1946ರಲ್ಲಿ ಅವರು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯೂ ಆದರು. ನೆಹರುರ ಮೊದಲ ಸಂಪುಟದಲ್ಲಿ ಅವರು ವಿದೇಶಾಂಗ ವ್ಯವಹಾರಗಳ ಖಾತೆಯ ಡೆಪ್ಯೂಟಿ ಸಚಿವರಾಗಿ, ನಂತರ ರೈಲ್ವೆ ಸಚಿವರಾಗಿ ಕೆಲಸ ಮಾಡಿದರು. ಆ ದಿನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಲ್ಲಿಂದ ಸ್ಪರ್ಧಿಸಿದ್ದರೂ ಆರಿಸಿ ಬರುತ್ತಿದ್ದರು. 1952ರಲ್ಲಿ ಕೇಸ್ಕರ್ ಉತ್ತರ ಪ್ರದೇಶದ ಸುಲ್ತಾನಪುರದಿಂದ ಸ್ಪರ್ಧಿಸಿ ಗೆದ್ದು, ನೆಹರು ಮಂತ್ರಿಮಂಡಲದಲ್ಲಿ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವರಾದರು. ಮೂಲತಃ ಹಿಂದೂಸ್ತಾನಿ ಸಂಗೀತ ಗಾರರಾಗಿದ್ದ ಕೇಸ್ಕರ್ ಅವರಿಗೆ ಹಿಂದಿ ಸಿನಿಮಾ ಹಾಡುಗಳೆಂದರೆ ಆಗಿಬರುತ್ತಿರಲಿಲ್ಲ, ಅವು ಉರ್ದು ಮತ್ತು ಇಂಗ್ಲಿಷ್ ಮಿಶ್ರಿತವಾಗಿವೆ, ಮುಸ್ಲಿಂ ಸಂಸ್ಕೃತಿಯನ್ನು ಪ್ರಚಾರ ಮಾಡುತ್ತಿವೆ, ಭಾರತೀಯ ಸಂಸ್ಕೃತಿಯನ್ನು ವಿರೂಪಗೊಳಿಸುತ್ತಿವೆ ಎಂದು ಬಲವಾಗಿ ನಂಬಿದ್ದ ಅವರು, ಆಕಾಶವಾಣಿಯಲ್ಲಿ ಅವುಗಳಿಗೆ ನಿಷೇಧ ಹೇರಿದರು. ಹಿಂದಿ ಸಿನಿಮಾ ಹಾಡುಗಳು ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತವನ್ನು ಅನುಸರಿಸದೇ, ಕೆಟ್ಟ ಸಂಗೀತ ಪರಂಪರೆಗೆ ನಾಂದಿ ಹಾಡಿವೆ ಎಂದು ಅವರು ನಂಬಿದ್ದರು. ಸಂಗೀತ ಅಂದ್ರೆ ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತ ಎಂದು ಅವರು ಪ್ರತಿಪಾದಿಸುತ್ತಿದ್ದರು. ಹಿಂದಿ ಸಿನಿಮಾಗಳು ಕೀಳು ಮತ್ತು ಕಳಪೆ ಅಭಿರುಚಿಯಿಂದ ಕೂಡಿರುತ್ತವೆ ಎಂದು ಅವರು ಬಹಿರಂಗವಾಗಿ ಹೇಳುತ್ತಿದ್ದರು. ಈ ಕುರಿತು ಹಿಂದಿ ಚಿತ್ರರಂಗದ ಅಂದಿನ ದಿಗ್ಗಜರು ಕೇಸ್ಕರ್‌ರನ್ನು ಭೇಟಿ ಮಾಡಲು ಬಯಸಿದಾಗ, ಅವರು ಅವಕಾಶವನ್ನೇ ನೀಡಲಿಲ್ಲ. ಹಿಂದಿ ಸಿನಿಮಾ ಹಾಡನ್ನು ನಿಷೇಧಗೊಳಿಸಿದ್ದಕ್ಕೆ ಸಂಸತ್ತಿನಲ್ಲಿ ಚರ್ಚೆಗಳಾದವು. ಆದರೆ ಕೇಸ್ಕರ್ ಜಗ್ಗಲಿಲ್ಲ. ಕೇಸ್ಕರ್‌ರ ಈ ನಿರ್ಧಾರದ ಪ್ರಯೋಜನವನ್ನು ರೇಡಿಯೋ ಸಿಲೋನ್ ಪಡೆಯಿತು. ಅದು ಹಿಂದಿ ಸಿನಿಮಾ ಹಾಡುಗಳನ್ನು ಬಿತ್ತರಿಸಲಾರಂಭಿಸಿತು. ಬಿನಾಕಾ ಗೀತ್ ಮಾಲಾ, ಅಪ್ ಹಿ ಕೆ ಗೀತ್, ಪುರಾನಿ ಫಿಲಮೋ ಕೆ ಗೀತ್‌ನಂಥ ಜನಪ್ರಿಯ ಕಾರ್ಯಕ್ರಮಗಳನ್ನು ಅದು ಆರಂಭಿಸಿತು. ಅಮೀನ್ ಸಯಾನಿ ಅವರ 'ಬಿನಾಕಾ ಗೀತ್‌ಮಾಲಾ' ಯಶಸ್ಸಿನ ಉತ್ತುಂಗಕ್ಕೇರಿತು. ಇದರ ಫಲವಾಗಿ, ಆಕಾಶವಾಣಿ ತನ್ನ ಕೇಳುಗ ವೃಂದವನ್ನು ಕಳೆದುಕೊಂಡಿತು. ರೇಡಿಯೋ ಸಿಲೋನ್ ಮುಂಬೈಯಲ್ಲಿ ರೇಡಿಯೋ ಅಡ್ವರ್ಟೈಸಿಂಗ್ ಸರ್ವಿಸ್ ಆರಂಭಿಸಿ, ಜಾಹೀರಾತಿನ ಆದಾಯವನ್ನೂ ಕೊಳ್ಳೆ ಹೊಡೆಯಲಾರಂಭಿಸಿತು. ಕೇಸ್ಕರ್ ಇಷ್ಟಕ್ಕೆ ಸುಮ್ಮನಾಗಲಿಲ್ಲ. ರೇಡಿಯೋದಲ್ಲಿ ಕ್ರಿಕೆಟ್ ಕಾಮೆಂಟರಿಯನ್ನೂ ರದ್ದು ಪಡಿಸಿದರು. ಹಾರ್ಮೋನಿಯಂ ಬಳಸಿದ ಎಲ್ಲ ಪ್ರಕಾರಗಳ ಸಂಗೀತವನ್ನೂ ನಿಷೇಧಿಸಿಬಿಟ್ಟರು. ಇದರಿಂದ ಆಕಾಶವಾಣಿ ಇನ್ನಿಲ್ಲದ ಹಿನ್ನಡೆ ಅನುಭವಿಸಿತು. ಆದರೆ ಕೇಸ್ಕರ್ ಆ ಸಮಯದಲ್ಲಿ 'ಆಕಾಶವಾಣಿ ರಾಷ್ಟ್ರೀಯ ಸಂಗೀತ ಸಮ್ಮೇಳನ'ವನ್ನು ಆರಂಭಿಸಿದರು. ಸಿತಾರ್ ಮಾಂತ್ರಿಕ ಪಂಡಿತ್ ರವಿಶಂಕರ್ ನೇತೃತ್ವದಲ್ಲಿ 'ವಾದ್ಯ ವೃಂದ' ಶುರುವಾಯಿತು. ಆದರೆ ಹಿಂದಿ ಸಿನಿಮಾ ಹಾಡುಗಳನ್ನು ನಿಷೇಧಿಸಿದ ಕೇಸ್ಕರ್ ತೀರ್ಮಾನದಿಂದ ಆಕಾಶವಾಣಿ ಇನ್ನಿಲ್ಲದ ಹೊಡೆತ ಅನುಭವಿಸಿತು. ಇಷ್ಟಾದರೂ ಕೇಸ್ಕರ್ ತಮ್ಮ ಮೊಂಡು ಹಠವನ್ನು ಬಿಡಲಿಲ್ಲ.

ಕುಮಾರಸ್ವಾಮಿಗೆ ಸಿಕ್ಕ ಅಮಿತ ಸಂದೇಶ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕೆಲ ದಿನಗಳ ಹಿಂದೆ ದಿಲ್ಲಿಗೆ ಹೋಗಿದ್ದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಮಣಿಸಲು ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಅನುಸರಿಸಬೇಕಾದ ತಂತ್ರಗಳ ಬಗ್ಗೆ ಈ ಸಂದರ್ಭದಲ್ಲಿ ಉಭಯ ನಾಯಕರು ಚರ್ಚಿಸಿದ್ದಾರೆ. ಈ ವೇಳೆ ಬಿಜೆಪಿ-ಜೆಡಿಎಸ್ ಸೈನ್ಯಗಳ ಮಧ್ಯೆ ಇರಬೇಕಾದ ಹೊಂದಾಣಿಕೆಯ ಬಗ್ಗೆ ಕುಮಾರಸ್ವಾಮಿ ಪ್ರಸ್ತಾಪಿಸಿದ್ದಾರೆ.

ಅವರ ಪ್ರಸ್ತಾಪದ ಇಂಗಿತವನ್ನು ಅರ್ಥಮಾಡಿಕೊಂಡ ಅಮಿತ್ ಶಾ, 'ಹೌದು ಈ ವಿಷಯದಲ್ಲಿ ನಾವು ಮುನ್ನೆಚ್ಚರಿಕೆ ತೆಗೆದುಕೊಳ್ಳಲೇಬೇಕು. ಸ್ವಲ್ಪ ಎಚ್ಚರ ತಪ್ಪಿದರೂ ಕಡ್ಡಿಯಂಥ ಸಮಸ್ಯೆ ಗುಡ್ಡವಾಗಿಬಿಡುತ್ತದೆ. ಹೀಗಾಗಿ ಉಭಯ ಪಕ್ಷಗಳ ಮಧ್ಯದ ಸಮನ್ವಯಕ್ಕಾಗಿ ರಾಧಾ ಮೋಹನದಾಸ್ ಅಗರ್‌ವಾಲ್ ಅವರನ್ನು ಕರ್ನಾಟಕಕ್ಕೆ ಕಳಿಸುವ ತೀರ್ಮಾನ ತೆಗೆದುಕೊಂಡಿದ್ದೇವೆ. ಅವರು ಲೋಕಸಭೆ ಚುನಾವಣೆ ಮುಗಿಯುವವರೆಗೂ ಕರ್ನಾಟಕದಲ್ಲಿದ್ದು ಜೆಡಿಎಸ್ ಜತೆಗಿನ ಮೈತ್ರಿಗೆ ಬಿಜೆಪಿ ಕಡೆಯಿಂದ ಹೊಡೆತ ಬೀಳದಂತೆ ನೋಡಿಕೊಳ್ಳುತ್ತಾರೆ' ಅಂದಿದ್ದಾರೆ.

ಅಂದ ಹಾಗೆ, ಲೋಕಸಭಾ ಚುನಾವಣೆಯನ್ನು ಬಿಜೆಪಿ ಜತೆ ಸೇರಿ ಎದುರಿಸುವುದರಲ್ಲಿ ಜಾತ್ಯತೀತ ಜನತಾದಳಕ್ಕೆ ಎರಡನೇ ಮನಸ್ಸಿಲ್ಲ ಎಂಬುದು ಅಮಿತ್ ಶಾ ಅವರಿಗೆ ಗೊತ್ತು. ಕಾರಣ? ಇವತ್ತು ಕರ್ನಾಟಕದಲ್ಲಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಬಗ್ಗೆ ಜೆಡಿಎಸ್ ಕುದಿಯುತ್ತಿದೆ. ಮಾಜಿ ಪ್ರಧಾನಿ ದೇವೇಗೌಡರಾಗಲೀ, ಕುಮಾರಸ್ವಾಮಿ ಅವರೇ ಆಗಲಿ, ಕರ್ನಾಟಕದ ನೆಲೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮೇಲೇಳಲಾಗದಂಥ ಏಟು ಕೊಡಲು ಕಾಯುತ್ತಿದ್ದಾರೆ. ಹೀಗಾಗಿ ಚುನಾವಣೆಯಲ್ಲಿ ತಾವು ಜಿದ್ದಾಜಿದ್ದಿ ಹೋರಾಟ ಮಾಡುವುದಷ್ಟೇ ಅಲ್ಲ, ಕಾಂಗ್ರೆಸ್ ಕ್ಯಾಂಡಿಡೇಟುಗಳನ್ನು ಸೋಲಿಸಲು ಬಿಜೆಪಿಗೆ ತಮ್ಮ ಸಂಪೂರ್ಣ ಶಕ್ತಿಯನ್ನು ಧಾರೆ ಎರೆಯುತ್ತಾರೆ.

ಆದರೆ ಸಮಸ್ಯೆ ಇರುವುದು ಕರ್ನಾಟಕದ ಕೆಲ ಬಿಜೆಪಿ ನಾಯಕರಲ್ಲಿ. ಅವರಿಗೆ ಜೆಡಿಎಸ್ ಜತೆ ತಮ್ಮ ಪಕ್ಷ ಮಾಡಿಕೊಂಡಿರುವ ಮೈತ್ರಿಯ ಬಗ್ಗೆ ಒಲವಿಲ್ಲ. ಹೀಗಾಗಿ ಹಾಸನ, ಮಂಡ್ಯ ಸೇರಿದಂತೆ ಜೆಡಿಎಸ್ ಎಲ್ಲೆಲ್ಲಿ ಸ್ಪರ್ಧಿಸಬಹುದೋ ಅಲ್ಲೆಲ್ಲಿ ಅಡ್ಡೇಟು ಹಾಕುವ ಲೆಕ್ಕಾಚಾರವಿದೆ. ರಾಜ್ಯ ಮಟ್ಟದ ನಾಯಕರಲ್ಲಿ ಹೀಗೆ ಜೆಡಿಎಸ್‌ಗೆ ಅಡ್ಡೇಟು ಹಾಕುವ ಲೆಕ್ಕಾಚಾರ ಇಲ್ಲವಾದರೂ ಸ್ಥಳೀಯ ಮಟ್ಟದಲ್ಲಿ ಬೇರುಬಿಟ್ಟಿರುವ ಕೆಲ 'ಲೋಕಲ್ ಲೀಡರು'ಗಳು ಇಂಥ ಅಡ್ಡೇಟಿಗೆ ರೆಡಿ ಆಗುತ್ತಿರುವ ಮಾಹಿತಿ ಹಲವು ದಿನಗಳಿಂದ ಅಮಿತ್ ಶಾ ಅವರಿಗೆ ತಲುಪುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಕಿಡಿಕಿಡಿಯಾಗಿರುವ ಅವರು, 'ಚುನಾವಣೆಯಲ್ಲಿ ನಮ್ಮವರು ಜೆಡಿಎಸ್ ಪಕ್ಷಕ್ಕೆ ಫಾಸಿ ಮಾಡಿದರೆ ಅದರಿಂದ ಹಾನಿಯಾಗುವುದು ನಮಗೇ. ಹೀಗಾಗಿ ಈ ವಿಷಯದಲ್ಲಿ ಮೈತ್ರಿಧರ್ಮಕ್ಕೆ ಚ್ಯುತಿಯಾಗದಂತೆ ನೋಡಿಕೊಳ್ಳಿ' ಅಂತ ರಾಜ್ಯ ನಾಯಕರಿಗೆ ಮೆಸೇಜು ಕಳಿಸಿದ್ದಾರೆ. ಅಷ್ಟೇ ಅಲ್ಲ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಪರಮಾಪ್ತರೂ ಆಗಿರುವ ರಾಧಾ ಮೋಹನದಾಸ್ ಅಗರ್‌ವಾಲ್ ಅವರನ್ನು ಕರ್ನಾಟಕಕ್ಕೆ ಕಳಿಸಿದ್ದಾರೆ. 'ಅಗರ್‌ವಾಲ್ ಅವರ ಜತೆ ನಿಮ್ಮ ಪಕ್ಷದ ನಾಯಕರು ಸಂಪರ್ಕದಲ್ಲಿರಲಿ; ಮೈತ್ರಿಗೆ ಧಕ್ಕೆಯಾಗುವ ರೀತಿಯಲ್ಲಿ ಯಾರೇ ನಡೆದುಕೊಂಡರೆ ಅವರ ಬಗ್ಗೆ ಮಾಹಿತಿ ಕೊಡಿ. ಮುಂದಿನದನ್ನು ನಮಗೆ ಬಿಡಿ' ಅಂತ ಅಮಿತ್ ಶಾ ಅವರು ಕುಮಾರಸ್ವಾಮಿ ಅವರಿಗೆ ಹೇಳಿದ್ದಾರೆ.

ಬಿಜೆಪಿ ವರಿಷ್ಠರ ಚಿಂತೆ ಏನು?: ಅಂದ ಹಾಗೆ, ಕರ್ನಾಟಕದಲ್ಲಿ ಜೆಡಿಎಸ್ ಜತೆಗಿನ ಮೈತ್ರಿಗೆ ತಮ್ಮ ಪಕ್ಷದ ಕೆಲವರು ವಿರುದ್ಧವಾಗಿರುವ ಬೆಳವಣಿಗೆಯನ್ನು ಅಮಿತ್ ಶಾ ಗಂಭೀರವಾಗಿ ಪರಿಗಣಿಸಲು ಮತ್ತೊಂದು ಕಾರಣವಿದೆ. ಅದೆಂದರೆ, ಕರ್ನಾಟಕದ ಚುನಾವಣೆಗೆ ಸಂಬಂಧಿಸಿದಂತೆ ದಿಲ್ಲಿಗೆ ತಲುಪಿರುವ ಲೇಟೆಸ್ಟು ಸರ್ವೆ ರಿಪೋರ್ಟು, ಮೈತ್ರಿಕೂಟದ ಗಳಿಕೆ ಕುಸಿಯುವ ಸಾಧ್ಯತೆಗಳನ್ನು ಗುರುತಿಸಿದೆ. ಅದರ ಪ್ರಕಾರ, ತಕ್ಷಣವೇ ಚುನಾವಣೆ ನಡೆದರೆ ಬಿಜೆಪಿ-ಜೆಡಿಎಸ್ ಮೈತ್ರಿಕೂಟಕ್ಕೆ 21, ಕಾಂಗ್ರೆಸ್ ಪಕ್ಷಕ್ಕೆ 7 ಸ್ಥಾನಗಳು ಸಿಗಲಿವೆ.

ಕಳೆದ ತಿಂಗಳು ಇದೇ ಸರ್ವೇ ಟೀಮು ದಿಲ್ಲಿಗೆ ಕಳಿಸಿದ್ದ ರಿಪೋರ್ಟು, ತಕ್ಷಣ ಚುನಾವಣೆ ನಡೆದರೆ ಬಿಜೆಪಿ-ಜೆಡಿಎಸ್ ಮೈತ್ರಿಕೂಟಕ್ಕೆ 25 ಕ್ಷೇತ್ರಗಳಲ್ಲಿ ಗೆಲುವು ಸಿಗಲಿದೆ ಎಂದಿತ್ತು. ಆದರೆ ಅದೇ ಟೀಮಿನ ರಿಪೋರ್ಟು ಈಗ ಮೈತ್ರಿಕೂಟದ ಗಳಿಕೆ ಕಡಿಮೆಯಾಗಲಿದೆ ಅಂದಿರುವುದು ಬಿಜೆಪಿ ವರಿಷ್ಠರಲ್ಲಿ ಚಿಂತೆಯನ್ನು ಹುಟ್ಟಿಸಿದೆ. ಹೀಗಾಗಿ ಈ ಸ್ಥಿತಿಗೆ ಏನು ಕಾರಣ ಅಂತ ಪರಿಶೀಲಿಸಿದ ಅವರಿಗೆ ತಮ್ಮ ಪಕ್ಷದ ಕೆಲವರು ಜೆಡಿಎಸ್‌ಗೆ ಅಡ್ಡೇಟು ಹೊಡೆಯುವ ಲೆಕ್ಕಾಚಾರದಲ್ಲಿರುವುದು ಸ್ಪಷ್ಟವಾಗಿದೆ. ಹಾಗೊಂದು ವೇಳೆ ಇಂಥ ಕಾರಣಗಳಿಗಾಗಿ ಕರ್ನಾಟಕ